# ಕೃಷಿ ಮಾರಾಟ ಇಲಾಖೆ,

# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ

**ದಿನಾಂಕ : 03-01-2020 ರಂದು ಮಧ್ಯಾಹ್ನ 12.00 ಗಂಟೆಗೆ ವಿಜಯಪುರ ಆಡಳಿತ ಕಛೇರಿಯ ಸಭಾ ಭವನದಲ್ಲಿ ಸಮಿತಿಯ ಅಧ್ಯಕ್ಷರಾದ ಮಾನ್ಯ ಶ್ರೀ ಸುರೇಶ ಐಗೌಡ ಬಿರಾದಾರ, ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಿತಿಯ ಸಾಮಾನ್ಯ ಸಭೆಯ ನಡುವಳಿಕೆಗಳು.**

**-:: ಸಭೆಗೆ ಹಾಜರಿದ್ದ ಸದಸ್ಯರುಗಳು ::-**

| | | |
|---|---|---|
| 1. | ಶ್ರೀ ಸುರೇಶ. ಐಗೌಡ. ಬಿರಾದಾರ | ಅಧ್ಯಕ್ಷರು |
| 2. | ಶ್ರೀ ಸುರೇಶ ಮಲ್ಲಪ್ಪ ತಳವಾರ | ಉಪಾಧ್ಯಕ್ಷರು |
| 3. | ಶ್ರೀ ಚಂದ್ರಶೇಖರ. ಪರುತಗೌಡ. ಪಾಟೀಲ | ಸದಸ್ಯರು |
| 4. | ಶ್ರೀ ಸಾಹೇಬಗೌಡ. ದ್ಯಾಮಗೌಡ. ಬಿರಾದಾರ | ಸದಸ್ಯರು |
| 5. | ಶ್ರೀ ವಿಶ್ವನಾಥ. ಬಸವನಗೌಡ. ಪಾಟೀಲ | ಸದಸ್ಯರು |
| 6. | ಶ್ರೀ ಶೇಖರ. ರಾಚಪ್ಪ. ಗೊಳಸಂಗಿ | ಸದಸ್ಯರು |
| 7. | ಶ್ರೀಮತಿ ಮಾದೇವಿ. ಶಂಕರಗೌಡ. ಪಾಟೀಲ | ಸದಸ್ಯರು |
| 8. | ಶ್ರೀ ಅಣ್ಣಪ್ಪ ಕಲ್ಲಪ್ಪ ದಾಶ್ಯಾಳ | ಸದಸ್ಯರು |
| 9. | ಶ್ರೀ ಸುರೇಶ. ಕಿಶನ. ಚವ್ಹಾಣ | ಸದಸ್ಯರು |
| 10. | ಶ್ರೀ ವಿಜಯಕುಮಾರ. ಶಿವಪ್ಪ. ಮಂಗಳವೇಡೆ | ಸದಸ್ಯರು |
| 11. | ಶ್ರೀ ಪಿರಗೊಂಡ. ಮಲಕಪ್ಪ. ಗದ್ಯಾಳ | ಸದಸ್ಯರು |
| 12. | ಶ್ರೀಮತಿ. ಸಾಬವ್ವ. ಯಲ್ಲಪ್ಪ. ಪೂಜಾರಿ. | ಸದಸ್ಯರು. |
| 13. | ಶ್ರೀ ಕಲ್ಲಪ್ಪ. ಶಿವಪ್ಪ. ಇಂಡಿ, | ಸದಸ್ಯರು. |
| 14. | ಶ್ರೀ ಹಣಮಂತ. ಶಿವಪ್ಪ. ಲೋಕುರಿ | ಸದಸ್ಯರು. |

| ಸಭೆಗೆ ಗೈರು ಹಾಜರಿದ್ದ ಸದಸ್ಯರು | ಸಭೆಗೆ ಹಾಜರಿದ್ದ ಅಧಿಕಾರಿಗಳು |
|---|---|
| 1) ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ ಮತ್ತು ಇಲಾಖಾ ಪ್ರತಿನಿಧಿಗಳು, ವಿಜಯಪುರ. | 1) ಶ್ರೀ ಆರ್. ಎಂ. ಕುಮಾರಸ್ವಾಮಿ ಜಂಟಿ ನಿರ್ದೇಶಕರು/ಕಾರ್ಯದರ್ಶಿ, ಕೃ,ಉ,ಮಾ,ಸ, ವಿಜಯಪುರ.<br>2) ಶ್ರೀ ಆಯ್. ಎಸ್. ಕದರಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ, ವಿಜಯಪುರ |

ಪ್ರಾರಂಭದಲ್ಲಿ ಸಭೆಗೆ ಹಾಜರಿದ್ದ ಎಲ್ಲ ಸದಸ್ಯರನ್ನು ಕಾರ್ಯದರ್ಶಿಗಳು ಸ್ವಾಗತಿಸಿದರು, ನಂತರ ವಿಷಯದ ಮೇಲೆ ಚರ್ಚೆಯನ್ನು ಪ್ರಾರಂಭಿಸಲಾಯಿತು.

**ವಿಷಯ ಸಂ.01:** **ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು ವಿಚಾರ.**

**ಠರಾವು ಸಂ.01:** ದಿನಾಂಕ: 16-11-2019 ರಂದು ಜರುಗಿದ ಸಮಿತಿಯ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ನಡವಳಿಕೆಗಳನ್ನು ಓದಲಾಯಿತು. ನಡವಳಿಕೆಗಳ ಮೇಲೆ ಕ್ರಮ ಕೈಕೊಂಡಿರುವುದಕ್ಕೆ ಕಾರ್ಯದರ್ಶಿಯವರು ವಿವರಣೆಯನ್ನು ಸಭೆಯ ಗಮನಕ್ಕೆ ತಂದರು. ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸಲಾಯಿತು.

**ವಿಷಯ ಸಂ.02:** **2019 ನೇ ನವ್ಹಂಬರ್ ತಿಂಗಳ ಆದಾಯ ಮತ್ತು ವೆಚ್ಚಗಳನ್ನು ಪರಿಶೀಲಿಸಿ ಅನುಮೋದಿಸುವ ಕುರಿತು.**

**ಠರಾವು ಸಂ.02:**

| ತಿಂಗಳು | ಆದಾಯ | ವೆಚ್ಚ | ಉಳಿತಾಯ | ಕೊರತೆ |
|---|---|---|---|---|
| ನವ್ಹಂಬರ್–2019 | 10262051 | 6314143 | 3947908 | -- |
| ಡಿಸೆಂಬರ್–2019 | 23709237 | 1348170 | 22361067 | -- |

ಸದರಿ ತಿಂಗಳ ಆದಾಯ ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ, ಕಾರ್ಯದರ್ಶಿಯವರು ನೀಡಿದ ವಿವರಣೆಯಂತೆ ಅನುಮೋದಿಸಿ ತೀರ್ಮಾನಿಸಲಾಯಿತು.

**ವಿಷಯ ಸಂ.03:** **ಲೈಸನ್ಸ್ ಬೇಡಿ ಬಂದ ಅರ್ಜಿಗಳ ಕುರಿತು.**

**ಠರಾವು ಸಂ.03:** 2019-20 ನೇ ಸಾಲಿನಿಂದ ಮುಂದಿನ 10 ವರ್ಷಗಳ ಕಾಲಾವಧಿಗೆ ಹೊಸದಾಗಿ ಲೈಸನ್ಸ್‌ಗಳನ್ನು ನೀಡಲು ಅರ್ಜಿಗಳನ್ನು ಸಲ್ಲಿಸಿರುವುದನ್ನು ಪರಿಶೀಲಿಸಿ ಲೈಸನ್ಸ್ ಮಂಜೂರಾತಿಗಾಗಿ ಈ ಕೆಳಕಂಡ ಪ್ರಸ್ತಾವನೆಗಳನ್ನು ಸಮಿತಿಯಲ್ಲಿ ಮಂಡಿಸಲಾಯಿತು.

| ಹೊಸದಾಗಿ ಬಂದ ಲೈಸನ್ಸ ಗಳು | | |
|---|---|---|
| 1 | ಸಾಗರ ಇಂಡಸ್ಟ್ರೀಜ್, ಪ್ರೋ//ಚೆನಬಸಪ್ಪಗೌಡ ಪಾಟೀಲ | ರಫ್ತು, ಆಮದು ದಾಸ್ತಾನು, ಕ್ರಷರ್ |
| 2 | ಸಚ್ಚಿದಾನಂದ ನೀಮ್ ಇಂಡಸ್ಟ್ರೀಜ್, ಪ್ರೋ//ಮಲ್ಲಿಕಾರ್ಜುನ ಚಿ ಬೊಳಶೆಟ್ಟಿ | ರಫ್ತು, ಆಮದು ದಾಸ್ತಾನು, ಸಂಸ್ಕರಣ |
| 3 | ಶ್ರೀ ಆರ್. ಎ. ಬಿರಾದಾರ, ಪ್ರೋ//ರಾಜಶೇಖರ. ಆರ್. ಬಿರಾದಾರ | ದಲ್ಲಾಲಿ |
| 4 | ರಾಜೇಶ ರೇವಣಸಿದ್ದಪ್ಪ ಕತ್ತಿ, ಪ್ರೋ//ರಾಜೇಶ ರೇವಣಸಿದ್ದಪ್ಪ ಕತ್ತಿ | ದಲ್ಲಾಲಿ |
| 5 | ಮುರಳಿಧರ ಎಂ ಪವಾರ ಪ್ರೋ//ಮುರಳಿಧರ | ದಲ್ಲಾಲಿ |

ಮೇಲ್ಕಂಡಂತೆ ಅಗತ್ಯವಿರುವ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವುದನ್ನು ಪರಿಶೀಲಿಸಲಾಯಿತು. ಹಾಗೂ ಸದರಿ ಲೈಸನ್ಸ್ ನೀಡುವ ಪೂರ್ವದಲ್ಲಿ ಸ್ಥಳ ಪರಿಶೀಲನೆ ಮಾಡಿ ಹೊಸದಾಗಿ ಲೈಸನ್ಸ್ ನೀಡಲು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ ಸಂ.04: ಕೊಡಗು ಜಿಲ್ಲೆಯ ಪ್ರವಾಹ ಪೀಡಿತರಿಗೆ ಸಮಿತಿಯಿಂದ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ರೂ.5.00 ಲಕ್ಷಗಳ ದೇಣಿಗೆ ನೀಡುವ ಕುರಿತು.**

**ಠರಾವು ಸಂ.04:** ಕೊಡಗು ಜಿಲ್ಲೆಯ ಪ್ರವಾಹ ಪೀಡಿತರಿಗೆ ಸಮಿತಿಯಿಂದ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಮಾರುಕಟ್ಟೆ ಶುಲ್ಕದ ಆದಾಯದ ಮೇಲೆ ಪರಿಹಾರ ಮೊತ್ತವನ್ನು ನಿಗಧಿಪಡಿಸಿ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ರವರು ತಮ್ಮ ಸುತ್ತೋಲೆ ಸಂಖ್ಯೆ:ಕೃಮಾಇ/ಮೈಮುಂಪ/ಪರಿಹಾರ/347/2019-20, ದಿನಾಂಕ :18-10-2019 ರನ್ವಯ ಸೂಕ್ತ ನಿರ್ದೇಶನ ನೀಡಿದ ಮೇರೆಗೆ ಸಮಿತಿಯಿಂದ ಪಾವತಿಸಬೇಕಾದ ಮೊತ್ತ ರೂ.5-00 ಲಕ್ಷಗಳನ್ನು ಮುಖ್ಯ ಮಂತ್ರಿಗಳ ನೈಸರ್ಗಿಕ ವಿಕೋಪ ನಿಧಿಗೆ ದಿನಾಂಕ:07-11-2019 ರಂದು ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗಿರುವುದನ್ನು ಸಮಿತಿಯ ಸಭೆಯಲ್ಲಿ ದೃಢೀಕರಿಸಿ ತೀರ್ಮಾನಿಸಲಾಯಿತು.

**ವಿಷಯ ಸಂ.05: ರಾಜ್ಯದಲ್ಲಿ ಉಂಟಾಗಿರುವ ಪ್ರವಾಹದಿಂದ ಸಾಕಷ್ಟು ಪ್ರಾಣ ಹಾಗೂ ಆಸ್ತಿ ನಷ್ಟವಾಗಿರುವುದರಿಂದ ಸಮಿತಿಯಿಂದ ರೂ.5.00 ಲಕ್ಷಗಳ ದೇಣಿಗೆಯನ್ನು ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡುವ ಕುರಿತು.**

**ಠರಾವು ಸಂ.05:** ರಾಜ್ಯದಲ್ಲಿ ಉಂಟಾಗಿರುವ ಪ್ರವಾಹದಿಂದ ಸಾಕಷ್ಟು ಪ್ರಾಣ ಹಾಗೂ ಆಸ್ತಿ ನಷ್ಟವಾಗಿರುವುದರಿಂದ ಸಮಿತಿಯಿಂದ ಸಂಕಷ್ಟ ಎದುರಿಸುತ್ತಿರುವ ಕುಟುಂಬಗಳಿಗೆ ಅಲ್ಪ ಸಹಕಾರಿಯಾಗಲೆಂದು ಸಮಿತಿ ವತಿಯಿಂದ ರೂ.5-00 ಲಕ್ಷಗಳ ದೇಣಿಗೆಯನ್ನು ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಪಾವತಿಸಲು ಮಂಜೂರಾತಿಯನ್ನು ನೀಡುವಂತೆ ಈ ಕಛೇರಿ ಪ್ರಸ್ತಾವನೆ ಸಂಖ್ಯೆ:ಕೃಮಾಇ/ಕೃಉಮಾಸ/ವಿ/ನಿಯವಿ/1204/2019-20, ದಿನಾಂಕ:14-08-2019 ರಡಿ ಸಲ್ಲಿಸಲಾಗಿತ್ತು. ಅದರಂತೆ ಉತ್ತರ ಕರ್ನಾಟಕ ಜಿಲ್ಲೆ ಪ್ರವಾಹ ಪೀಡಿತರಿಗೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡಲು ಕೇಂದ್ರ ಕಛೇರಿ ಸುತ್ತೋಲೆ ಸಂಖ್ಯೆ:ಕೃಮಾಇ/ಮೈಮುಂಪ/ಪರಿಹಾರ/347/2019-20, ದಿನಾಂಕ :18-10-2019 ರಲ್ಲಿ ಕೊಡಗು ಜಿಲ್ಲೆಯ ಪ್ರವಾಹ ಪೀಡಿತರಿಗಾಗಿ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಸಮಿತಿಗಳಿಂದ ದೇಣಿಗೆ ನೀಡಲು ನಿಗಧಿಪಡಿಸಿರುವ ಮಾರ್ಗಸೂಚಿಗಳನ್ವಯ ಕ್ರಮ ವಹಿಸಲು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ರವರು ಸೂಚಿಸಿರುತ್ತಾರೆ. ಆದುದರಿಂದ ಉತ್ತರ ಕರ್ನಾಟಕ ಪ್ರವಾಹ ಪೀಡಿತರಿಗೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡಲು ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ ಸಂ.06: ಸಮಿತಿಯ ವಾಹನ ಸಂಖ್ಯೆ:ಕೆ.ಎ-28, ಎಂ-5640 ನ್ನು ವಿಲೇವಾರಿ ಮಾಡುವ ಕುರಿತು.**

**ಠರಾವು ಸಂ.06:** ವಿಜಯಪುರ ಸಮಿತಿಯ ಒಡೆತನದಲ್ಲಿರುವ ಸಮಿತಿಯ ವಾಹನ ಸಂಖ್ಯೆ:ಕೆ.ಎ-28 ಎಂ-5640 ನ್ನು ಮೇಲಿಂದ ಮೇಲೆ ದುರಸ್ತಿಗೆ ಬರುತ್ತಿರುವುದರಿಂದ ಸದರಿ ವಾಹನವನ್ನು ವಿಲೇವಾರಿ ಮಾಡಲು ಪರಿಶೀಲಿಸಿ ಮೌಲ್ಯವನ್ನು ನಿಗಧಿಪಡಿಸಿ ನೀಡುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ವಿಜಯಪುರ ರವರಿಗೆ ತಿಳಿಸಲಾಗಿತ್ತು. ಅದರಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ವಿಜಯಪುರ ರವರು ಸದರಿ ವಾಹನಕ್ಕೆ ರೂ.45,000=00 ಮೌಲ್ಯವನ್ನು ನಿಗಧಿಪಡಿಸಿ ಪತ್ರವನ್ನು ನೀಡಿರುತ್ತಾರೆ.